Vijay Karnataka, Saptahika Laval VK,
Sunday, 1 April 2012, pp. 1



# ದೇವರು ತಪ್ಪು ಮಾಡಲಿಲ್ಲ!

ಕೆಲವು ತಿಂಗಳುಗಳಿಂದ ಜಗತ್ತಿನ ಅತಿ ಮೇಧಾವಿ ವಿಜ್ಞಾನಿ ಐನ್‌ಸ್ಟೀನ್ ತಪ್ಪು ಮಾಡಿದ್ದಾರೆ. ಎಂದು ಮಾಧ್ಯಮಗಳು ಚೀರುತ್ತಿದ್ದವು. ಇದು 'ದೇವರ ತಪ್ಪು' ಎನ್ನುವ ರೀತಿಯಲ್ಲಿ ಪ್ರಚಾರವೂ ಆಗುತ್ತಿತ್ತು. ಬೆಳಕಿನ ವೇಗವನ್ನು ಯಾವ ವಸ್ತುವೂ ತಲುಪುವುದಿಲ್ಲ ಎಂಬ ಐನ್‌ಸ್ಟೀನ್ ಅವರ ಮಹಾಸಿದ್ಧಾಂತಕ್ಕೆ ಏಟು ಬೀಳುವ ಸಂಭವವಿತ್ತು! ಆದರೆ ಈಗ....?

■ **ಪಾಲಹಳ್ಳಿ ವಿಶ್ವನಾಥ್**

ವಿಧಾತ ಬೆಳಕನ್ನು ಮೊದಲು ಸೃಷ್ಟಿಸಿದ ಎನ್ನುತ್ತವೆ ಕೆಲವು ಧರ್ಮಗ್ರಂಥಗಳು. ಅದು ಎಷ್ಟು ನಿಜವೋ ಗೊತ್ತಿಲ್ಲ. ಆದರೆ ಪ್ರಾಕೃತಿಕ ಜಗತ್ತಿನಲ್ಲಿ ಬೆಳಕಿಗೆ ಅಗ್ರಸ್ಥಾನವಿದೆ ಎನ್ನುವುದಂತೂ ನಿಜ. 400 ವರ್ಷಗಳ ಹಿಂದೆ ಗೆಲಿಲಿಯೊ ಬೆಳಕಿನ ವೇಗವನ್ನು ಕಂಡುಹಿಡಿಯಲು ಸಫಲನಾಗದಿದ್ದರೂ, ಅದು ಅತಿ ವೇಗ ಎಂದು ಮಂಡಿಸಿದನು. ಕಳೆದ ಶತಮಾನದ ಪ್ರಾರಂಭದ ಪ್ರಾರಂಭದ ಹೊತ್ತಿಗೆ ಅನೇಕ ಪ್ರಯೋಗಗಳಿಂದ ಅದರ ವೇಗದ ಮೌಲ್ಯ ಸರಿಯಾಗಿ ತಿಳಿಯಿತು. ಅದು ಒಂದು ಸೆಕೆಂಡಿಗೆ ಸುಮಾರು 3 ಲಕ್ಷ ಕಿಲೋ ಮೀಟರುಗಳು!ನಿಖರವಾಗಿ ಹೇಳಬೇಕೆಂದರೆ ಅದು ಸೆಕೆಂಡಿಗೆ 2,99,292.458 ಕಿಲೋಮೀಟರುಗಳು. ವಿಮಾನಗಳದು ಸಾಧಾರಣ ಮನುಷ್ಯನಿಗಿಂತ 100 ಪಟ್ಟು ಹೆಚ್ಚಿನ ವೇಗ. ಆದರೆ, ಬೆಳಕಿನದು ವಿಮಾನದ ವೇಗಕ್ಕಿಂತ 10 ಲಕ್ಷ ಪಟ್ಟು ಹೆಚ್ಚು ವೇಗ! ಈ ವೇಗದಲ್ಲಿ ಸೂರ್ಯನಿಂದ ಹೊರಟ ಬೆಳಕು ಅಂದಾಜು 8 ನಿಮಿಷಗಳಲ್ಲಿ ನಮ್ಮನ್ನು ಮುಟ್ಟುತ್ತದೆ. ಕನ್ನಡಿಯ ಮುಂದೆ ನಿಂತಾಗ, ನಮಗೆ ಕಾಣುವ ಮುಖ ಸ್ವಲ್ಪ ಎಳೆಯ ಮುಖವೇ. ಇದ್ಯಾಕೆ ಹೀಗೆ? ಬೆಳಕು ನಮ್ಮ ಮುಖದ ಮೇಲೆ ಬಿದ್ದು ಕನ್ನಡಿಯನ್ನು ತಲುಪಿ ಪ್ರತಿಫಲನವಾಗಿ ನಮ್ಮನ್ನು ಸೇರಬೇಕಲ್ಲವೇ? ಇಷ್ಟೂ ಘಟಿಸಲು ಬೇಕಾದ ಆ ಒಂದು ಕ್ಷಣ (ನ್ಯಾನೊ ಸೆಕೆಂಡ್ ಅಂದರೆ, ಒಂದು ಸೆಕೆಂಡನ್ನು 100 ಕೋಟಿಯಿಂದ ಭಾಗಿಸಿದರೆ ಬರುವ ಸಮಯ) ಮಾತ್ರ ನಳನಳಿಸುವಂಥ ಆ ಮುಖ ಕಾಣುತ್ತದಷ್ಟೆ. ಬೆಳಕಿನ ವೇಗ ಕಡಿಮೆಯಾಗುತ್ತ ಹೋದರೆ ನಮಗೆ ಕಾಣಿಸುವ ಮುಖವೂ ಎಳೆಯದಾಗುತ್ತ ಹೋಗುತ್ತದೆ!

ಆದರೆ ಈ ಬೆಳಕು ಎಂದರೇನು? ಯಾವ ತರಹದ ವಸ್ತುವಿದು? ಇದೇನು ಜೇಬಿನಲ್ಲಿ ಇಟ್ಟುಕೊಳ್ಳುವ ವಸ್ತುವೇ? ಹಿಂದಿನ ತಿಳಿವಳಿಕೆಯ ಪ್ರಕಾರ ಬೆಳಕು ತರಂಗ ರೂಪದಲ್ಲಿ ಚಲಿಸುತ್ತದೆ ಎನ್ನುವ ಸಿದ್ಧಾಂತವಿತ್ತು. ಆದರೆ 20ನೇ ಶತಮಾನದ ಪ್ರಾರಂಭದಲ್ಲಿ ಬೆಳಕಿನ ಆ ಚಿತ್ರ ತಪ್ಪೇನೋ ಎನ್ನುವ ಅನುಮಾನ ಕಾಡಿಸಲು ಶುರುವಾಯಿತು. ಆ ಅನುಮಾನಕ್ಕೆ ಪರಿಹಾರ ಸಿಕ್ಕಿದ್ದು ವಿಜ್ಞಾನಿಗಳಿಂದಲೋ, ಯೂನಿವರ್ಸಿಟಿಗಳ ಪ್ರೊಫೆಸರುಗಳಿಂದಲೋ ಅಲ್ಲ. ಆ ಸಮಸ್ಯೆಗೆ ಉತ್ತರ ಚಿಮ್ಮಿಬಂದಿದ್ದು ಒಂದು ಸರಕಾರಿ ಕಚೇರಿಯ ಕಾರಕೂನನೊಬ್ಬನಿಂದ!

ಈ ಸಮಯದಲ್ಲೇ ಸ್ವಿಟ್ಜರ್‌ಲ್ಯಾಂಡಿನ ಬರ್ನ್ ನಗರದ ಹಕ್ಕುಪತ್ರ ಕಚೇರಿಯ ಕೆಲಸಗಾರನೊಬ್ಬ ತನ್ನ ಹೊಸ ಹೆಂಡತಿ ಮಿಲೇವಾ ಮತ್ತು ಚಿಕ್ಕ ಮಗುವಿನ ಜತೆ ಸಂಸಾರ ಶುರು ಮಾಡಿದ್ದ. ಇಪ್ಪತ್ತಾರು ವಯಸ್ಸಿನ ಯುವಕನ ಬುದ್ಧಿಶಕ್ತಿಗೆ ಅವರ ಕಚೇರಿಯ ಕಾರ್ಯಗಳು ಅಷ್ಟೇನೂ ಆಯಾಮ ನೀಡುತ್ತಿರಲಿಲ್ಲ. ಕಚೇರಿಯ ಹಕ್ಕುಪತ್ರಗಳ ಪರಿಶೀಲನೆ, ಹೆಂಡತಿಯ ಜತೆ ಸರಸ-ವಿರಸಗಳು (ಪಾಪ, ಆ ಹೆಂಡತಿಯ ಜತೆ ಅವನಿಗೆ ವಿರಸವೇ ಜಾಸ್ತಿ ಇತ್ತು!), ಎಳೆಮಗುವಿನ ಅಳು.... ಈ ಎಲ್ಲ ಆಗು ಹೋಗುಗಳ ಮಧ್ಯೆಯೂ ವೈಜ್ಞಾನಿಕ ಯೋಚನೆಗಳನ್ನು ಬಿಡದ ಈ ಯುವಕನಿಂದ ಮಹಾಸಿದ್ಧಾಂತಗಳು ರೂಪುಗೊಳ್ಳುತ್ತಿದ್ದು, ಅವೆಲ್ಲವೂ 1905ರಲ್ಲಿ ನಾಲ್ಕು ಲೇಖನಗಳ ಮೂಲಕ ಹೊರಬಂದವು. ಇದರ ಪರಿಣಾಮ ಏನು ಗೊತ್ತೆ? 200 ವರ್ಷಗಳಿಂದ ಭೌತಶಾಸ್ತ್ರದ ಸಾರ್ವಭೌಮ ಪಟ್ಟ ಅಲಂಕರಿಸಿದ್ದ ಐಸಾಕ್ ನ್ಯೂಟನ್‌ನ ಸಿಂಹಾಸನದ ಜತೆ ಇಡೀ ವಿಜ್ಞಾನ ಲೋಕವೇ ಅಲ್ಲಾಡತೊಡಗಿತು!

ಈ ಕಾರಕೂನನ ನಾಲ್ಕು ಲೇಖನಗಳಲ್ಲೂ ವಿವಿಧ ರೀತಿಯಲ್ಲಿ ಹೊಸ ಪರಿಕಲ್ಪನೆಗಳು ಪ್ರತಿಪಾದಿತವಾಗಿದ್ದವು. ಅವುಗಳಲ್ಲಿ ಒಂದು ಬೆಳಕಿಗೆ ಸಂಬಂಧಪಟ್ಟಿತ್ತು. ಈತ ಬೆಳಕು ತರಂಗರೂಪವಲ್ಲದೆ ಯಾವ ತೂಕವೂ ಇರದ ಕಣರೂಪದಲ್ಲೂ (ಪಾರ್ಟಿಕಲ್) ಇರುತ್ತದೆ ಎಂದು ಸಾರಿದ. ಹೀಗಾಗಿಯೇ ಬೆಳಕು ಪೂರ್ಣಶಕ್ತಿ ರೂಪ ಎಂದೂ ಹೇಳಿದ. ಜತೆಗೆ ಅವನು ಮತ್ತೊಂದು ಅದ್ಭುತ ಸಂಗತಿಯನ್ನು ಪ್ರತಿಪಾದಿಸಿದ್ದ. ಅದೇನೆಂದರೆ, ಬೆಳಕು ಯಾವಾಗಲೂ ಒಂದೇ ವೇಗದಲ್ಲಿ ಚಲಿಸುತ್ತದೆ ಮತ್ತು ಯಾವ ವಸ್ತುವೂ ಬೆಳಕಿನ ಈ ವೇಗವನ್ನು ತಲುಪಲು ಸಾಧ್ಯವಿಲ್ಲ ಎಂಬ ವೈಜ್ಞಾನಿಕ ಸತ್ಯ. ಅಂತೂ ಬೆಳಕು ಆ ಹಕ್ಕುಪತ್ರ ಕಚೇರಿಗೆ ಹೋಗಿ ಯಾವ ವಸ್ತುವೂ ತನಗಿಂತ ಹೆಚ್ಚು ವೇಗವನ್ನು ಪಡೆಯುವುದಿಲ್ಲ ಎನ್ನುವ ಹಕ್ಕನ್ನು ಪಡೆಯಿತು. ಈ ಹಕ್ಕನ್ನು ಕೊಟ್ಟ ಆ ಯುವಕನೇ ಶತಮಾನದ ಮಹಾವಿಜ್ಞಾನಿಯಾಗಲಿದ್ದ ಆಲ್ಬರ್ಟ್ ಐನ್‌ಸ್ಟೀನ್!

■ **4ನೇ ಪುಟ ನೋಡಿ**

# ದೇವರು ತಪ್ಪು ಮಾಡಲಿಲ್ಲ!

ಬೆಳಕಿನ ಅಗಾಧ ವೇಗವನ್ನು ಕುರಿತು ಇಂಥದೇ ಅಭಿಪ್ರಾಯಗಳು ಆ ಕಾಲದ ಖ್ಯಾತ ವಿಜ್ಞಾನಿ ಪಾನ್ಕಾರೆಗೂ ಇತ್ತು. ಆದರೆ ವೈಜ್ಞಾನಿಕ ಚರಿತ್ರಕಾರ ಡೈಸನ್ ಪ್ರಕಾರ ಐನ್ ಸ್ಟೀನ್‌ಗಿದ್ದ ಕ್ರಾಂತಿಕಾರಿ ಮನೋಭಾವ ಪಾನ್ಕಾರೆಯಲ್ಲಿ ಇರಲಿಲ್ಲ. ಈ ಮಹಾಕಲ್ಪನೆಗಳ ಬಗ್ಗೆ ಐನ್‌ಸ್ಟೀನ್ ತಮ್ಮ ಜೀವನದ ಸಂಧ್ಯೆಯಲ್ಲಿ ಮೆಲುಕು ಹಾಕುತ್ತ, 'ಆ ಹಕ್ಕುಪತ್ರ ಕಚೇರಿಯಲ್ಲಲ್ಲದೆ ನಾನೇನಾದರೂ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ಇದ್ದಿದ್ದರೆ ನಾನು ಈ ಹೊಸ ದಾರಿ ಹಿಡಿಯುತ್ತಿರಲಿಲ್ಲವೇನೋ ಎನಿಸುತ್ತದೆ' ಎಂದಿದ್ದರು. ಕ್ವಾಂಟಂ ಪರಿಕಲ್ಪನೆಗೂ ಒತ್ತು ಕೊಟ್ಟಿದ್ದ ಈ ಸಿದ್ಧಾಂತಕ್ಕೆ 1921ರಲ್ಲಿ ನೊಬೆಲ್ ಬಹುಮಾನವೂ ಬಂತು.

ಕಣದ ವೇಗ ಹೆಚ್ಚಾದಾಗ ಅದು ಶಕ್ತಿ ಗಳಿಸುತ್ತ ಅದರ ತೂಕ ಹೆಚ್ಚಾಗುತ್ತದೆ (ಇದನ್ನು ಓದಿ ಪಾರ್ಕಿನಲ್ಲಿ ಬಿಡುಬೀಸಾಗಿ ನಡೆಯುವುದನ್ನು ನಿಲ್ಲಿಸಬೇಡಿ); ಅಂದರೆ ಶಕ್ತಿ ತೂಕ ರೂಪ ಪಡೆಯುತ್ತದೆ. ಆದರೆ ಕಣ ಅತಿ ತೂಕ ಗಳಿಸುತ್ತ ಹೋದಾಗ ಅದಕ್ಕೆ ಹೆಚ್ಚು ವೇಗ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಕಣಕ್ಕೆ ಸ್ವಲ್ಪ ತೂಕವಿದ್ದರೂ ಅದು ಬೆಳಕಿನ ವೇಗವನ್ನು ಗಳಿಸುವುದು ಅಸಾಧ್ಯ! ಇದಲ್ಲದೆ ಮತ್ತೊಂದು ಮಹಾ ಪರಿಕಲ್ಪನೆ ತೂಕ ಮತ್ತು ಶಕ್ತಿಯ ಸಮಾನತೆ. ಇವೆರಡನ್ನು ಜೋಡಿಸುವುದು ಬೆಳಕಿನ ವೇಗ! ಅದೇ ಜಗತ್ ಪ್ರಖ್ಯಾತ ಸೂತ್ರ $E=mxc^2$

ಈ ಸಿದ್ಧಾಂತವನ್ನು ಕಳೆದ 100 ವರ್ಷ ಯಾರೂ ಪ್ರಶ್ನಿಸಿರಲಿಲ್ಲ. ಆದರೆ ಈಗ ಕೆಲವು ತಿಂಗಳುಗಳಿಂದ ಯೂರೋಪಿನಲ್ಲಿ ನಡೆಸುತ್ತಿರುವ ಒಂದು ಪ್ರಯೋಗದ ಪ್ರಕಾರ, ನ್ಯೂಟ್ರಿನೊ ಎಂಬ ಕಣಗಳು ಬೆಳಕಿಗಿಂತ ಹೆಚ್ಚುವ ವೇಗದಲ್ಲಿ ಪಯಣಿಸುತ್ತವೆ ಎನ್ನುವ ಸುದ್ದಿ ಸ್ಫೋಟವಾಯಿತು! ಈ ಪ್ರಯೋಗದಲ್ಲಿ ಜಿನೀವಾದ ಸೆರ್ನ್ ಪ್ರಯೋಗಾಲಯದಿಂದ ಈ ನ್ಯೂಟ್ರಿನೊ ಕಣಗಳನ್ನು 730 ಕಿಲೋ ಮೀಟರ್ ದೂರದ ಇಟಲಿಯ ಗ್ರಾನ್ ಸಾಸೋ ಎಂಬ ಜಾಗದಲ್ಲಿರುವ ಉಪಕರಣಗಳಿಗೆ ಕಳಿಸಿ, ಪ್ರಯಾಣದ ಸಮಯವನ್ನು ಅಳೆದಾಗ ಈ ವಿಚಿತ್ರ ಕಂಡುಬಂತು. ವ್ಯತ್ಯಾಸ ಹೆಚ್ಚೇನಲ್ಲ, ಅಲ್ಲಿ ಕಂಡುಬರುತ್ತಿದ್ದ ವ್ಯತ್ಯಾಸ 60 ನ್ಯಾನೊ ಸೆಕೆಂಡುಗಳಷ್ಟೆ. ಅಂದರೆ 100 ಕಿಲೋ ಮೀಟರ್‌ನಲ್ಲಿ 8 ನ್ಯಾನೊ ಸೆಕೆಂಡುಗಳಷ್ಟು ಹೆಚ್ಚು ವೇಗ ಅಷ್ಟೆ! ಆದರೂ ವೈಜ್ಞಾನಿಕ ಪ್ರಪಂಚವನ್ನು ಅಲ್ಲಾಡಿಸಿದ ವ್ಯತ್ಯಾಸ!

ಪ್ರಾಯಶಃ ಬೆಳಕನ್ನೂ ಸೋಲಿಸಿರುವ ಈ ಪ್ರಚಂಡ ವೇಗದ ಶೂರ ಕಣಗಳು ಯಾವುವು? ಈ ನ್ಯೂಟ್ರಿನೊ ಕಣಗಳೂ ಸ್ವಲ್ಪ ವಿಚಿತ್ರ ಕಣಗಳು. ಬೆಳಕಿನ ಕಣಗಳ ಹಾಗೆ ಇವುಗಳ ವಿದ್ಯುದಂಶವೂ ಸೊನ್ನೆ; ತೂಕವೂ ಅತಿ ಕಡಿಮೆ. ಇವು ಒಂದು ತರಹದ ಸನ್ಯಾಸಿ ಕಣವೂ ಬೇರೆ ಕಣಗಳ ಜತೆ ಹೆಚ್ಚು ವ್ಯವಹಾರವಿಲ್ಲ! ಎಷ್ಟು ಸ್ವಾರಸ್ಯಕರ ಕಣವೆಂದರೆ ಕಳೆದ ಕೆಲವು ದಶಕಗಳಲ್ಲಿ ಇವುಗಳ ಬಗ್ಗೆ ಪ್ರಯೋಗ ನಡೆಸಿದ ವಿಜ್ಞಾನಿಗಳಿಗೆ ಆಗಲೇ ಮೂರು ನೊಬೆಲ್ ಬಹುಮಾನಗಳನ್ನು ಗಳಿಸಿಕೊಟ್ಟಿರುವ ಕಣ. ಈ ಪ್ರಯೋಗ ಸರಿ ಎಂದು ಸಾಬೀತಾದರೆ ಮತ್ತೊಂದು ಬಹುಮಾನವೂ ಗಟ್ಟಿ!

ವೈಜ್ಞಾನಿಕ ಪ್ರಪಂಚವನ್ನು ನಡುಗಿಸುವಂತಹ ಈ ಸುದ್ದಿಯ ಬಗ್ಗೆ ಅನೇಕ ಪ್ರತಿಕ್ರಿಯೆಗಳು ಬಂದವು. ಈ ಪ್ರಯೋಗ ಸರಿಯಾಗಿಲ್ಲವೇನೋ ಎನ್ನುವ ಅಭಿಪ್ರಾಯಗಳೇ ಹೆಚ್ಚು. ಪ್ರಯೋಗಕಾರರು ಮೊದಮೊದಲೆಲ್ಲ ತಮ್ಮದೇ ಸರಿ ಎನ್ನುತ್ತಿದ್ದರು. ಆದರೆ ಅವರನ್ನು ಜನ ಪೂರ್ತಿ ನಂಬುತ್ತಿಲ್ಲ. ಐನ್‌ಸ್ಟೀನ್ ತಪ್ಪು ಮಾಡುವುದಿಲ್ಲ ಅನ್ನುವ ಕಾರಣಕ್ಕಲ್ಲ! ವೈಜ್ಞಾನಿಕ ಪ್ರಪಂಚದಲ್ಲಿ ವ್ಯಕ್ತಿ ಎಷ್ಟು ದೊಡ್ಡವನೇ ಇರಲಿ, ಅವರನ್ನೂ ಯಾವುದೇ ಮುಲಾಜಿಲ್ಲದೆ ಪ್ರಶ್ನಿಸಲಾಗುವುದು. ಬೆಳಕಿಗಿಂತ ಜಾಸ್ತಿ ವೇಗವಿರುವ ವಸ್ತುವೊಂದು ಇರುವುದೇ ನಿಜವಾದರೆ ಭೌತಿಕ ಪ್ರಪಂಚದ ಬಗ್ಗೆ ನಮಗಿರುವ ಬೇಕಾದಷ್ಟು ಅಭಿಪ್ರಾಯಗಳು ಬದಲಾಗಬೇಕಾಗಬೇಕಲ್ಲವೇ ? ಅದಕ್ಕೆ ಮೊದಲು ಬೇರೆ ಪ್ರಯೋಗಗಳೂ ನಡೆಯಲಿ, ಕಾದು ನೋಡೋಣ ಎಂದು ಇಂದಿನ ಅಗ್ರ ಸೈದ್ಧಾಂತಿಕ ವಿಜ್ಞಾನಿಗಳಾದ ವೈನ್‌ಬರ್ಗ್, ಗ್ಲಾಶೋವ್ ಮತ್ತಿತರರು ಹೇಳಿದರು.

ವಿಜ್ಞಾನ ಲೋಕಕ್ಕೆ ತಲೆನೋವು ಕೊಡುತ್ತಿದ್ದ ಈ ವಿಷಯ ಕೆಲವಾರಗಳ ನಂತರ ಇದ್ದಕ್ಕಿದ್ದಂತೆ ಬಗೆಹರಿಯಿತು. ಪ್ರಯೋಗಕಾರರು ತಮ್ಮ ಉಪಕರಣಗಳನ್ನು ಮತ್ತೆ ಮತ್ತೆ ಪರಿಶೀಲಿಸಿ, ಕೊನೆಗೆ 'ಅಯ್ಯೋ, ನಮ್ಮದೇ ತಪ್ಪು!' ಎಂದು ಒಪ್ಪಿಕೊಂಡರು. ಇದರಿಂದ ಅಂತೂ ಐನ್‌ಸ್ಟೀನ್ ತಪ್ಪು ಮಾಡಿಲ್ಲ ಎಂದು ಸಾಬೀತಾಯಿತು. ವಿಜ್ಞಾನ ಲೋಕದಲ್ಲಿ ಸದ್ಯಕ್ಕಂತೂ ಕದನ ವಿರಾಮದ ಪರಿಸ್ಥಿತಿ ಇದೆ. ಯಾರಿಗೆ ಗೊತ್ತು ? ಮತ್ತೆ ಯಾರೋ ಒಬ್ಬ ಪ್ರತಿಭಾಶಾಲಿ ಐನ್‌ಸ್ಟೀನ್‌ನ ಸಿದ್ಧಾಂತದಲ್ಲಿ ಇನ್ನೇನೋ ತಪ್ಪು ಕಂಡುಹಿಡಿಯಬಹುದು. ಅದೇನೂ ಕೆಟ್ಟದಲ್ಲ. ವಿಜ್ಞಾನ ಬೆಳೆದು ಬಂದ ರೀತಿಯೇ ಇದು! ■

